
ಕಥೆ





**ಶಾಂತಿ ಕೆ. ಅಪ್ಪಣ್ಣ**

ಕಲೆ: ಅಕ್ಷಯ ಹೆಗಡೆ ಜಾಲಿಮನೆ



............ ಇಪ್ಪತ್ತು ವರ್ಷ ಎಂಬುದು ಸುಮ್ಮನೆ ಎರಡರ ಪಕ್ಕ ಸೊನ್ನೆ ಹಾಕಿದಂತೆ ಅಲ್ಲ. ಅದು ಒಬ್ಬ ಮನುಷ್ಯನ ಸರಾಸರಿ ಆಯುಸ್ಸಿನ ಒಂದು ಮುಖ್ಯ ಭಾಗ. ಅದರಲ್ಲೂ, ಇಪ್ಪತ್ತರಿಂದ ನಲವತ್ತರವರೆಗಿನ ಆ ಇಪ್ಪತ್ತು ವರ್ಷಗಳು ಅತ್ಯಂತ ನಿರ್ಣಾಯಕವಾದಂಥವು. ಅಂಥದ್ದೊಂದು ಮುಖ್ಯ ಪರ್ವ ನನ್ನ ಕೈಯಿಂದ ಹೇಗೆ ಜಾರಿತು ಎಂಬುವುದನ್ನು ಎರಡೇ ಪದಗಳಲಿ ಹೇಳಿಬಿಡಬಹುದಾದರೂ, ಆ ಅಷ್ಟೂ ವರ್ಷಗಳು ನಾನು ನನ್ನೊಳಗೆ ನಡೆಸಿದ ಹೋರಾಟಕ್ಕೆ ಅದು ಈಡು ಕೊಡಬಹುದೆ? ಎಂದಿಗಾದರೂ?

‘ಅಯ್ಯೋ ಇದ್ಯಾರು ಪ್ರಭಾನ? ನಿಜ್ವೇನೋ? ಇಷ್ಟು ದಿನ ಎಲ್ಲಿದ್ಯೋ? ಹೆಂಗಿದ್ಯೋ? ಇದು ನೀನೇನಾ...? ನಮ್ಮೆಲ್ಲ ಬುಟ್ಟುಬುಟ್ಟು ಎಂಗಪ್ಪಾ ಇದ್ದೆ? ಗ್ಯಾಪ್ನ ಬರ್ನೇ ಇಲ್ವಾ ಇಷ್ಟೊರ್ಸ?....’ ಅತ್ತೆ ನನ್ನನ್ನು ಅಪ್ಪಿಕೊಂಡು ಏನೆಲ್ಲ ಕೇಳಿದಳು, ಇನ್ನೂ ಏನೇನೋ ಹೇಳಿದಳು. ಇದಕ್ಕೆಲ್ಲ ಏನು ಉತ್ತರಿಸುವುದು? ಇಪ್ಪತ್ತು ವರ್ಷದ ಲೆಕ್ಕವನು ಒಂದು ಮಾತಿನಲಿ ಹೇಗೆ ಹೇಳಿಮುಗಿಸುವುದು? ಒಂದು ಕಾಲಕ್ಕೆ ನಾನು ಅತೀವವಾಗಿ ಪ್ರೀತಿಸಿದ್ದ, ನನ್ನದೆಂದು ನಂಬಿದ್ದ, ಎಂದಿಗೂ ಇಲ್ಲಿಂದ ಎಲ್ಲೂ ಹೋಗಲಾರೆನೆಂದು ಭ್ರಮಿಸಿದ್ದ ನನ್ನದೇ ಮನೆಯ ಬಾಗಿಲಿನಲ್ಲಿ ಮಾತುಕಳೆದುಕೊಂಡು ನಿಂತಿದ್ದೆ. ಎಲ್ಲಿ ಒಳಗಿನಿಂದ ಸರಸ್ವತಿ ಓಡಿಬಂದು ಎದೆಗೆ ಜೋತುಬೀಳುವಳೋ ಅನಿಸಿ ಒಂದುಕ್ಷಣ